64(566) ಶ್ರೀ ಜೀವರಾಜ್ ಡಿ.ಎನ್.(ಶೃಂಗೇರಿ) : ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕುವೆಂಪು ಜೈವಿಕ ಅರಣ್ಯ ವ್ಯಾಪ್ತಿಯಲ್ಲಿ ರೈತರು ಕೂಲಿ ಕಾರ್ಮಿಕರು ಹಾಗೂ ಪರಿಶಿಷ್ಟ ಜಾತಿ/ಜನಾಂಗದವರು ಮನೆ ಕೊಟ್ಟಿಗೆ ಇತ್ಯಾದಿ ಸೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ತಲತಲಾಂತರಗಳಿಂದ ವಾಸಿಸುತ್ತಿರುವ ಇವರನ್ನು ಒಕ್ಕಲೆಬ್ಬಿಸುವುದು ಉಚಿತವೆ;

ಇ) ವಾಸದ ಮನೆ ಹಾಗೂ ಕೊಟ್ಟಿಗೆಗಳನ್ನು ಜೈವಿಕ ಅರಣ್ಯ ವ್ಯಾಪ್ತಿಯಿಂದ ಹೊರಗಿಡಲು ಸರ್ಕಾರ ಕ್ರಮ ಕೈಗೊಳ್ಳುವುದು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) :

ಅ) ಬಂದಿದೆ.

ಆ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನ ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ 1980 ರಡಿಯಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸರ್ಕಾರದ ಆದೇಶ ಸಂ: ಎಫ್‌ಇಇ 135 ಇಎನ್‌ವಿ 2003 (ಭಾಗ), ದಿನಾಂಕ 23-10-2003 ರ ಪ್ರಕಾರ ಸ್ಥಳೀಯ ಜನರ ಹಕ್ಕು ಬಾಧ್ಯತೆಗಳಿಗೆ ದಕ್ಕೆ ಉಂಟು ಮಾಡುವುದಿಲ್ಲ.

65(567) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯ ವಿದ್ಯುತ್ ಬೇಡಿಕೆ ಎಷ್ಟು ಹಾಗೂ ನಿಗದಿಪಡಿಸಿರುವ ಯೂನಿಟ್ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು):

ಆ) ನೀರಾವರಿ ಪಂಪ್‌ಸೆಟ್‌ಗಳಿಗೆ ಎಷ್ಟು ಗಂಟೆ ವಿದ್ಯುತ್ ಸರಬರಾಜು ಮಾಡಲಾಗುವುದು:

ಇ) ನಿಗದಿ ಪಡಿಸಿದ ಅವಧಿಗಿಂತ ಕಡಿಮೆ ಅವಧಿ ವಿದ್ಯುತ್ ಪೂರೈಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಸರ್ಕಾರ ಘೋಷಣೆ ಮಾಡಿದ ಅವಧಿಗೆ ವಿದ್ಯುತ್ ಪೂರೈಸಲು ತಕ್ಷಣ ಕ್ರಮ ಕೈಗೊಳ್ಳುವುದೆ:

ಉ) ಹಾಗಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಚಿಕ್ಕಮಗಳೂರು ಜಿಲ್ಲೆಯ ವಿದ್ಯುತ್ ಬೇಡಿಕೆಯು ಪ್ರತಿದಿನ ಸರಾಸರಿ 15.27 ಲಕ್ಷ ಯೂನಿಟ್‌ಗಳಾಗಿರುತ್ತದೆ. ಈ ಜಿಲ್ಲೆಗೆ ಪ್ರತಿದಿನ ಸರಾಸರಿ 14.38 ಲಕ್ಷ ಯೂನಿಟ್‌ಗಳನ್ನು ನಿಗದಿಪಡಿಸಲಾಗಿದೆ/ ಸರಬರಾಜು ಮಾಡಲಾಗುತ್ತದೆ.

ದಿನ ಒಂದಕ್ಕೆ ತಾಲ್ಲೂಕುವಾರು ಲಭ್ಯವಿರುವ ಸರಾಸರಿ ವಿದ್ಯುಚ್ಛಕ್ತಿ ಪ್ರಮಾಣ.

ಕ್ರಮ ಸಂಖ್ಯೆ	ತಾಲ್ಲೂಕು	ಯೂನಿಟ್ (ಲಕ್ಷಗಳಲ್ಲಿ)
1	ಚಿಕ್ಕಮಗಳೂರು	2.45
2	ತರೀಕೆರೆ	4.65
3	ಕಡೂರು	4.97
4	ಮೂಡಿಗೆರೆ	0.64
5	ನರಸಿಂಹರಾಜಪುರ	0.97
6	ಕೊಪ್ಪ	0.50
7	ಶೃಂಗೇರಿ	0.20
	ಒಟ್ಟು	14.38

ಆ) ದಿನಾಂಕ 5.1.05 ರಿಂದ ದಿನವಹಿ ಹಗಲು ವೇಳೆಯಲ್ಲಿ 5 ಗಂಟೆ ರಾತ್ರಿ ಸಮಯದಲ್ಲಿ 4 ಗಂಟೆ: ಹೀಗೆ ಒಟ್ಟು 9 (ಒಂಭತ್ತು) ತಾಸುಗಳ ವಿದ್ಯುಚ್ಛಕ್ತಿಯನ್ನು ನೀರಾವರಿ ಪಂಪ್‌ಸೆಟ್‌ಗಳಿಗೆ ಒದಗಿಸಲಾಗುತ್ತಿದೆ.

ಇ) ಇ, ಈ ಮತ್ತು ಉ

ಹೌದು. ಗಮನಕ್ಕೆ ಬಂದಿದೆ.

ಈ) ಚಿಕ್ಕಮಗಳೂರು ಜಿಲ್ಲೆಗೆ ಹಾಸನದಲ್ಲಿರುವ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಹಾಸನ ವಿತರಣಾ ಕೇಂದ್ರದಲ್ಲಿರುವ ಒಂದು 100 ಎಂ.ವಿ.ಎ. ವಿದ್ಯುತ್ ಪರಮರ್ತಕವು ಜನವರಿ ತಿಂಗಳ ಪ್ರಾರಂಭದಲ್ಲಿ

ಉ) ವಿಫಲಗೊಂಡಿದ್ದರಿಂದ. ಚಿಕ್ಕಮಗಳೂರಿನ ಸರಬರಾಜನ್ನು ಶಿವಮೊಗ್ಗ ಎಂ.ಆರ್.ಎಸ್. ಕೇಂದ್ರದ ಕಡೆಯಿಂದ ಪಡೆಯಲಾಗುತ್ತಿದೆ. ಎಂ.ಆರ್.ಎಸ್. ಕಡೆಯಿಂದ ಸರಬರಾಜು ಪಡೆಯಲು ವಿದ್ಯುತ್ ಮಾರ್ಗದ ಮಿತಿಯಿರುವುದರಿಂದ ನಿಗದಿಪಡಿಸಿದ ಅವಧಿಗಿಂತ ಕಡಿಮೆ ವಿದ್ಯುತ್ ಸರಬರಾಜು ಮಾಡುವ ಸಂದರ್ಭ ಒದಗಿದೆ. ವಿಫಲಗೊಂಡ ಆದಷ್ಟು ಶೀಘ್ರವಾಗಿ ಅದನ್ನು ಅಳವಡಿಸಿ, ನಿಗದಿತ ಅವಧಿಗೆ ವಿದ್ಯುತ್ ಪೂರೈಕೆ ಮಾಡುವ ವ್ಯವಸ್ಥೆ ಮಾಡಲಾಗುವುದು.

66(568) ಶ್ರೀ ಜೀವರಾಜ ಡಿ.ಎನ್. (ಶೃಂಗೇರಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶೃಂಗೇರಿ, ಕೊಪ್ಪ ಮತ್ತು ನರಸಿಂಹರಾಜಪುರ ತಾಲ್ಲೂಕುಗಳಲ್ಲಿನ ಬಹುತೇಕ ರಸ್ತೆಗಳು ನಾದುರಸ್ಥಿಯಾಗಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಅತೀ ಹೆಚ್ಚು ಮಳೆ ಬೀಳುವ ಈ ತಾಲ್ಲೂಕಿನಲ್ಲಿ ರಸ್ತೆ ಸುಸ್ಥಿತಿಯಲ್ಲಿಡಲು ಸರ್ಕಾರ ಹೆಚ್ಚಿನ ಅನುದಾನವನ್ನು ಒದಗಿಸುವುದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬಂದಿರುತ್ತದೆ.

ಆ) ಮುಖ್ಯ ಮಂತ್ರಿ ಗ್ರಾಮೀಣ ರಸ್ತೆನಿಧಿ 3054 ಯೋಜನೆಯಡಿಯಲ್ಲಿ ಸುಮಾರು 107.50 ಲಕ್ಷಗಳ ಮೊತ್ತದಲ್ಲಿ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚಿ ನಿರ್ವಹಣೆ ಮಾಡುವ ಕಾರ್ಯಕ್ರಮವನ್ನು ಶೀಘ್ರದಲ್ಲಿ ಕೈಗೊಳ್ಳಲಾಗುತ್ತಿದೆ.

ಇ) 2005–06ನೇ ಸಾಲಿನಿಂದ 3 ವರ್ಷಗಳವರೆಗೆ ರಾಜ್ಯ ಹೆದ್ದಾರಿಗಳ ನಿರ್ವಹಣೆಯನ್ನು 458 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ನಿರ್ವಹಿಸಲು ಉದ್ದೇಶಿಸಲಾಗಿದೆ.

67(569) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಭೂಮಿ ಯೋಜನೆಯಡಿ ಪಹಣಿ ಪಡೆಯಲು ಪಾವತಿಸಬೇಕಾದ ಶುಲ್ಕ ಇಳಿಸಲು ಸರ್ಕಾರ ಉದ್ದೇಶಿಸಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗಿನಿಂದ ಜಾರಿಗೆ ತರಲಾಗುವುದು;

ಇ) ಈ ಯೋಜನೆಯನ್ನು ಹೋಬಳಿ ಮಟ್ಟಕ್ಕೆ ವಿಸ್ತರಿಸಲಾಗುವುದು;

ಈ) ಹಾಗಿದ್ದಲ್ಲಿ, ಯಾವಾಗ?